

# ನದಿ ದಾಟುವ ಈ ಪರಿ..!



ಈ ಮಕ್ಕಳು ಪ್ರತಿಭಾ ಕಾರಂಜಿ ಸ್ಪರ್ಧೆಗಾಗಿ ಇಂತಹ ಸಾಹಸ ಪ್ರದರ್ಶನ ಮಾಡುತ್ತಿರಬಹುದೆಂದು ಖಂಡಿತ ಭಾವಿಸಬೇಡಿ. ಅವರು ಕೆಳಗೆ ಹರಿಯುತ್ತಿರುವ ತುಂಬಿದ ನದಿಯ ಪ್ರವಾಹವನ್ನು ಪ್ರತಿದಿನ ಬೆಳಿಗ್ಗೆ ಹೀಗೆಯೇ ಸಾಹಸದಲ್ಲಿ ದಾಟಿಕೊಂಡು ಶಾಲೆಗೆ ಹೋಗುತ್ತಾರೆ. ಸಂಜೆ ಮನೆಗೆ ಮರಳಲು ಇದೇ ವಿಧಾನ.

ನೇಪಾಳದ ಗ್ಯಾಂಗ್ಟಕ್ ಬಳಿಯ ಜಾರಾಕೋಟ್ ಎಂಬಲ್ಲಿ ಕಾಣಬರುವ ಹಗ್ಗದ ಸೇತುವೆಯಿದು. ದೇಸೀ ತಂತ್ರಜ್ಞಾನದಲ್ಲಿ ಇದು ಸಿದ್ಧವಾಗಿದೆ. ಎರಡು ಬೆಟ್ಟಗಳ ನಡುವೆ ಬಿಗಿಯಾದ ಕೇಬಲನ್ನು ಕಟ್ಟಿ ನದಿ ದಾಟುವ ವಿಧಾನ ಅಲ್ಲಿ ಹರಿಯುವ ಸಣ್ಣ ಮತ್ತು ದೊಡ್ಡ ಗಾತ್ರದ ಆರು ಸಾವಿರಕ್ಕಿಂತ ಹೆಚ್ಚು ನದಿಗಳಲ್ಲಿ ಈಗಲೂ ಜೀವಂತವಾಗಿದೆ. ಸನಿಹದ ರಗ್ಡಾ ಬಜಾರ್‌ಗೆ ತಮ್ಮ ಕೃಷಿ ಸಾಮಗ್ರಿಗಳು, ಆಡು, ಕುರಿಗಳನ್ನು ಕೂಡ ಕೊಂಡುಹೋಗಲು ರೈತರು ಇದೇ ರೀತಿ ನದಿ ದಾಟುತ್ತಾರೆಂದರೆ ಎದೆಯೊಮ್ಮೆ ಅಲ್ಲಿಯೇ ಸ್ಥಬ್ಧವಾಗಿ ಬಿಡುತ್ತದೆ.

ದಾಟಲು ಬಳಸುವ ಕೇಬಲ್‌ಗಳು ತುಂಡಾಗಿ ನದಿಗೆ ಏಕಕಾಲದಲ್ಲಿ ಹತ್ತಾರು ಜನ ಬಿದ್ದು ಸಾಯುವುದು ಮಾಮೂಲಾಗಿದ್ದರೂ ನೇಪಾಳ ಸರ್ಕಾರ ಸುಸಜ್ಜಿತ ಸೇತುವೆಗಳ ನಿರ್ಮಾಣಕ್ಕೆ ಮುಂದಾಗಿಲ್ಲ. ಭಾರತದಲ್ಲಾದರೆ ಜನ ಮುಗಿ ಬಿದ್ದು ಮುಷ್ಕರ, ಬಂದ್ ಆಚರಿಸಿ ಬೇಡಿಕೆ ಈಡೇರಿಸಿಕೊಳ್ಳುತ್ತಿದ್ದರು. ಆದರೆ ನೇಪಾಳದ ಜನ ಇನ್ನೂ ಮಾರಣಾಂತಿಕ ಸೇತುವೆಗಳಿಗೇ ಜೋತು ಬಿದ್ದಿದ್ದಾರೆ.

■ ಪ.ರಾಮಕೃಷ್ಣ ಶಾಸ್ತ್ರಿ